ಶ್ರೀ ಎಂ. ಸಿ. ನಾಣಯ್ಯ :- ಒಂದು ವಾರ ಟೈಮ್ ಕೊಡಿಸಿ.

ಉಪಾಧ್ಯಕ್ಷರು :- ಅವರಿಗೆ ಉತ್ತರ ಕಳುಹಿಸಿ ಕೊಡಿ.

ಶ್ರೀ ಎಂ. ಸಿ. ನಾಣಯ್ಯ :- ಅವರಿಗೆ ಉತ್ತರ ಒದಗಿಸಿಕೊಡುತ್ತೇನೆ.

ವಿಷಯ :- ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಕಬ್ಬಿಗೆ ನಿಗದಿ ಪಡಿಸಿದ ದರ.

ಚುಕ್ಕಿ ಗುರುತಿನ ಪ್ರಶ್ನೆ ಸಂಖ್ಯೆ 414 (2992)

ಶ್ರೀ ವಿ. ಎಸ್. ಕೌಜಲಗಿ (ಅರಭಾವಿ) :- ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ, ಪರಿಸರ ಹಾಗೂ ಜೀವಪರಿಸ್ಥಿತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯು 1995-96ನೇ ಸಾಲಿನಲ್ಲಿ ನುರಿಸಿದ ಕಬ್ಬು ಎಷ್ಟು ಹಾಗೂ ಈ ಸಾಲಿನಲ್ಲಿ ಪ್ರತಿ ಟನ್ ಕಬ್ಬಿಗೆ ನಿಗದಿಪಡಿಸಿದ ದರವೆಷ್ಟು? ಮತ್ತು ಈಗ ರೈತರಿಗೆ ಪಾವತಿ ಮಾಡಿದ ಹಣವೆಷ್ಟು;

ಆ) ರೈತರಿಗೆ ಪಾವತಿ ಮಾಡಲು ಬೇಕಾದ ಹಣವನ್ನು ಯಾವ ಯಾವ ಸಂಘ ಸಂಸ್ಥೆಗಳಿಂದ ಕಾರ್ಖಾನೆಯವರು ಯಾವ ರೂಪದಲ್ಲಿ ಪಡೆದುಕೊಂಡಿರುವರು; (ವಿವರ ನೀಡುವುದು)

ಇ) ಪ್ರಸ್ತುತ ಹಂಗಾಮಿನಲ್ಲಿ ಉತ್ಪಾದಿಸಿದ ಸಕ್ಕರೆ ಪ್ರಮಾಣವೆಷ್ಟು? ಹಾಗೂ ಈಗ ಮಾರಾಟವಾಗದೆ ಕಾರ್ಖಾನೆಯ ಉಳಿದ ಸಕ್ಕರೆ ಎಷ್ಟು?

ಶ್ರೀ ಪಿ. ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ, ಯಂತ್ರಕಲೆ, ಪರಿಸರ ಹಾಗೂ ಜೀವಪರಿಸ್ಥಿತಿ ಶಾಸ್ತ್ರ ರಾಜ್ಯ ಸಚಿವರು) :-

ಅ) ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯು 1995-96 ನೇ ಸಾಲಿಗೆ ಕಬ್ಬು ಅರೆಯುವ ಹಂಗಾಮನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ. 94-95 ನೇ ಸಾಲಿಗೆ ಕಾರ್ಖಾನೆಯು 3.54 ಲಕ್ಷ ಮೆ. ಟನ್ ಕಬ್ಬು ನುರಿಸಿರುತ್ತದೆ. 1994-95 ನೇ ಸಾಲಿಗೆ ಕಾರ್ಖಾನೆಯು ಪ್ರತಿ ಟನ್ನಿಗೆ ಕಬ್ಬಿಗೆ ರೂ. 611.00 ನ್ನು ಮೊದಲನೆಯ ಮುಂಗಡವಾಗಿಯೂ ಮತ್ತು ಸಾಗಾಣಿಕೆ ಮತ್ತು ತೋಡ್ಡಿ ಎಂಬುದಾಗಿ ರೂ 75.00 ನ್ನು ಪಾವತಿ ಮಾಡಿದೆ. ಅಂತಿಮ ದರವನ್ನು ನಿಗದಿಪಡಿಸಿರುವುದಿಲ್ಲ.

ಆ) ರೈತರಿಗೆ ಪಾವತಿಸಬೇಕಾದ ಹಣವನ್ನು ಬೆಳಗಾಂ ಜಿಲ್ಲಾ ಸಹಕಾರಿ ಬ್ಯಾಂಕಿನಿಂದ ಸಕ್ಕರೆಯ ಅಡವು ಸಾಲ ಪಡೆದು ನೀಡಲಾಗಿದೆ. ಇನ್ನಾವ ಸಂಸ್ಥೆಯಿಂದಲೂ ಸಾಲ ಪಡೆದಿರುವುದಿಲ್ಲ.

ಇ) 94-95 ನೇ ಹಂಗಾಮಿನಲ್ಲಿ ಕಾರ್ಖಾನೆಯು 4,00,390 ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದಿಸಿದೆ. ಈ ಪೈಕಿ ಮಾರಾಟವಾಗದೆ ಉಳಿದಿರುವ ಸಕ್ಕರೆಯ ಪ್ರಮಾಣ 1,69,362 ಕ್ವಿಂಟಾಲ್.

ಶ್ರೀ ಚಂದ್ರಶೇಖರ್ ನಾಯಕ್ :- (ಶ್ರೀ ವಿ. ಎಸ್. ಕೌಜಲಗಿಯವರ ಪರವಾಗಿ) ಈಗ ರೈತರಿಗೆ ಕೊಡಬೇಕಾದ ಮೊದಲನೆ ಕಂತು ಹಣವನ್ನು ಡಿ.ಸಿ.ಸಿ. ಬ್ಯಾಂಕಿನಿಂದ ಸಾಲ ವಾಗಿ ಪಡೆಯಲಾಗಿದೆ. ಆದರೆ ಇನ್ನೂ ಸಕ್ಕರೆ ಅಲ್ಲಿ ಉಳಿದುಕೊಂಡಿರುವುದರಿಂದ 2 ನೇ ಬಿಲ್ಲು ನವೆಂಬರ್ ತಿಂಗಳಲ್ಲಿ ಹೋದಂತಹ ಕಬ್ಬಿಗೆ 2 ನೇ ಬಿಲ್ಲನ್ನು ಕೊಟ್ಟಿಲ್ಲ. ಅದರ ಬಗ್ಗೆ ಸಕ್ಕರೆ ಮಾರಾಟ ಆಗಿಲ್ಲ ಅದರ. ಬಗ್ಗೆ ಸರ್ಕಾರ ಏನು ವ್ಯವಸ್ಥೆ ಮಾಡುತ್ತೇದೆಂಬುದನ್ನು ತಿಳಿಸಬೇಕು.

ಶ್ರೀ ಪಿ. ಸಿ. ಸಿದ್ದನಗೌಡರ್ :- ಮಾನ್ಯ ಸದಸ್ಯರು ಕೇಳಿದ ಹಾಗೆ ನಮ್ಮ ರಾಜ್ಯದಲ್ಲಿ ಒಟ್ಟು 600 ಕೋಟಿ ಸಕ್ಕರೆ ದಾಸ್ತಾನು ಇದೆ. ಘಟಪ್ರಭಾ ಸಕ್ಕರೆ ಕಾರ್ಖಾನೆಯಲ್ಲೂ ಸಕ್ಕರೆ ದಾಸ್ತಾನು ಇದೆ. ಕೇಂದ್ರ ಸರ್ಕಾರದ ನೀತಿಯಿಂದ ಅವರು ಯಾವಾಗ ನಮಗೆ ಮಾರಾಟಕ್ಕೆ ಪರ್ಮಿಷನ್ ಕೊಡುತ್ತಾರೋ ಆವಾಗ ಮಾರಾಟ ಮಾಡುತ್ತೇವೆ. ಡಿ.ಸಿ.ಸಿ. ಬ್ಯಾಂಕ್ ನಿಂದ ಈಗಾಗಲೇ ಗೋಡೌನ್ ಲೋನ್ ತೆಗೆದುಕೊಂಡಿದ್ದಾರೆ. ಇನ್ನೂ ಬಾಕಿ ಉಳಿದಿರುವ ಬಗ್ಗೆ ನಾನು ತಕ್ಷಣ ಕ್ರಮ ತೆಗೆದುಕೊಂಡು ರೈತರ ಬಾಕಿಯನ್ನು ಕೊಡಲಿಕ್ಕೆ ಸಾಧ್ಯವಾದಷ್ಟು ತೀವ್ರ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ವಿಷಯ :- ಕೊಳಚೆ ಪ್ರದೇಶದ ಜನರಿಗೆ ಸೌಲಭ್ಯ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 420 (2990)

ಶ್ರೀ ಸೈಯದ್ ಜುಲ್ಫಿಕರ್ ಹಸ್ಮಿ (ಬೀದರ್) :- ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಪಟ್ಟಣದಲ್ಲಿ ಯಾವ ಯಾವ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಗುರುತಿಸಲಾಗಿದೆ?

ಆ) ಈ ಪ್ರದೇಶಗಳಲ್ಲಿರುವ ಅಂದಾಜು ಜನಸಂಖ್ಯೆ ಎಷ್ಟು?

ಇ) ಇಲ್ಲಿರುವ ಜನರ ಅಭಿವೃದ್ಧಿಗಾಗಿ ಯಾವ ಯಾವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ?

ಈ) ಇಲ್ಲಿರುವ ಎಷ್ಟು ಜನರಿಗೆ ಕೊಳವೆ ನಿರ್ಮೂಲನ ಮಂಡಳಿಯ ವತಿಯಿಂದ ಮನೆಗಳನ್ನು ಕಟ್ಟಿಕೊಡಲು ಕ್ರಮ ಕೈಗೊಳ್ಳಲಾಗಿದೆ?

ಉ) ಇದಕ್ಕಾಗಿ ಎಷ್ಟು ಹಣವನ್ನು ಕಳೆದ 3 ವರ್ಷಗಳಲ್ಲಿ ಖರ್ಚು ಮಾಡಲಾಗಿದೆ? (ವರ್ಷವಾರು ಅಂಕಿ ಅಂಶಗಳನ್ನು ಒದಗಿಸಲಾಗುವುದು).

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :-

ಅ) ಮಂಡಳಿ ವತಿಯಿಂದ ಬೀದರ್ ಪಟ್ಟಣದಲ್ಲಿ 13 ಕೊಳಚೆ ಪ್ರದೇಶಗಳನ್ನು ಗುರುತಿಸಿದ್ದು ಅವುಗಳು ಕೆಳಗಿನಂತಿರುತ್ತವೆ.

1. ಬುರಬುರ ಮೋಜಾ ಕಾಲನಿ.
2. ರಾಜಗೊಂಡ ಕಾಲನಿ.
3. ಅಬ್ದುಲ್ ಫಯಾಜ ದರ್ಗಾ ಕಾಲನಿ.